ನಿಟ್ಟೂರು ಬ್ಯಾರೇಜ್:– ಈ ಯೋಜನೆಗೆ 48.38 ಲಕ್ಷರೂ.ಗಳ ಅಂದಾಜು ತಯಾರಾಗಿದ್ದು ಇದರಿಂದ 208 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಿದೆ. ಅಂದಾಜು ಪಟ್ಟಿ ಪರಿಶೀಲನೆಯಲ್ಲಿದೆ. 92–93ನೇ ಆಯವ್ಯಯ ಪಟ್ಟಿಯಲ್ಲಿ 17.00 ಲಕ್ಷ ರೂ. ಅನುದಾನ ಸೇರಿದೆ.

ಆ) ಚಿಕ್ಕಮಾಗನೂರು ಮತ್ತು ಹಿರೇಮಾಗನೂರು ಬ್ಯಾರೇಜ್:

ಈ ಕಾಮಗಾರಿಯು ಯಾವ ಅನುಮೋದಿತ ಕಾರ್ಯಕ್ರಮದಲ್ಲಿಯೂ ಸೇರಿರುವುದಿಲ್ಲ. ಇದರ ಅಂದಾಜು ಪಟ್ಟಿ ತಯಾರಿಸಬೇಕಾಗಿದೆ.

ಲಿಂಗದಹಳ್ಳಿ ಬ್ಯಾರೇಜ್‌ಗೆ ಮಾತ್ರ ಆಡಳಿತಾತ್ಮಕ ಮಂಜೂರಾತಿ ಮತ್ತು ತಾಂತ್ರಿಕ ಒಪ್ಪಿಗೆ ದೊರೆತಿದೆ. ಉಳಿದ ಬ್ಯಾರೇಜ್‌ಗಳಿಗೆ ಮಂಜೂರಾತಿ ದೊರೆತಿಲ್ಲ.

ಇ) ಲಿಂಗದಹಳ್ಳಿ ಬ್ಯಾರೇಜ್‌ಗೆ ಆಧ್ಯತೆ ಮೇಲೆ ಪರಿಶೀಲಿಸಲಾಗುವುದು.

ನಿಟ್ಟೂರು ಬ್ಯಾರೇಜ್‌ಗೆ 93–94ನೇ ಸಾಲಿನಲ್ಲಿ 18.00 ಲಕ್ಷ ರೂ. ಅನುದಾನ ಒದಗಿಸಿದೆ.

ಚಿಕ್ಕಮಾಗನೂರು ಮತ್ತು ಹಿರೇಮಾಗನೂರು ಇದು ತಾಂತ್ರಿಕ ಮತ್ತು ಆರ್ಥಿಕ ಶಕ್ಯವಿದ್ದಲ್ಲಿ ಹಣದ ಲಭ್ಯತೆ ಮೇರೆಗೆ ಪರಿಶೀಲಿಸಲಾಗುವುದು. 93–94ನೇ ಸಾಲಿನ ಆಯವ್ಯಯದಲ್ಲಿ ಸೇರಿರುವುದಿಲ್ಲ.

ಸಿದ್ದಾಪುರ – ಹಳ್ಳಿಹೊಳೆ – ಮುದೂರು - ಜಡ್ಕಲ್ ರಸ್ತೆ ಅಭಿವೃದ್ಧಿ

459 (155): ಶ್ರೀ ಜಿ.ಎಸ್. ಆಚಾರ್ (ಬೈಂದೂರು):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಸಿದ್ದಾಪುರ – ಹಳ್ಳಿಹೊಳೆ – ಮುದೂರು – ಜಡ್ಕಲ್ ರಸ್ತೆಯ ಅಭಿವೃದ್ಧಿಗೆ ಲೋಕೋಪಯೋಗಿ ಇಲಾಖೆ ಯಾವ ಕ್ರಮ ಕೈಗೊಂಡಿದೆ;

ಆ) ತಾಲ್ಲೂಕಿನ ಅತ್ಯಂತ ಹಿಂದುಳಿದ ಭಾಗದಲ್ಲಿ ಹಾದುಹೋಗುವ ಈ ರಸ್ತೆಯ ಸಂಪೂರ್ಣ ಅಭಿವೃದ್ಧಿಗೆ ಎಷ್ಟು ವೆಚ್ಚ ಹಾಗೂ ಸಮಯ ತಗಲುವುದು;

ಇ) ರಸ್ತೆಯ ಮಹತ್ವದ ದೃಷ್ಟಿಯಿಂದ ಅದಕ್ಕೆ ಆದ್ಯತೆ ನೀಡಲಾಗುವುದೇ ?

ಶ್ರೀ ಕೆ.ಹೆಚ್. ರಂಗನಾಥ್, (ಲೋಕೋಪಯೋಗಿ ಸಚಿವರು):–

ಅ) ಆ ರಸ್ತೆಯ ಅತಿ ಆಗತ್ಯವಿರುವ ಕಾಮಗಾರಿಗಳಾದ 34.50ನೇ ಕಿ.ಮೀ.ನಲ್ಲಿ ಒಂದು ಸೇತುವೆ ನಿರ್ಮಾಣ ಹಾಗೂ 3 ಕಿ.ಮೀ.ಉದ್ದಕ್ಕೆ ಜಲ್ಲಿ ಹಾಕಿ ಡಾಂಬರು ಮಾಡುವ ಮತ್ತು ವಿಶೇಷ ದುರಸ್ತಿ, ವಾರ್ಷಿಕ ನಿರ್ವಹಣೆ ಇವುಗಳನ್ನು ಒಟ್ಟು 13.03 ಲಕ್ಷದ ಅಂದಾಜಿನಲ್ಲಿ ತೆಗೆದುಕೊಳ್ಳಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.

ಆ) ಆ ರಸ್ತೆಯ ಸರ್ವತೋಮುಖ ಅಭಿವೃದ್ಧಿ ಅಂದರೆ ರಸ್ತೆಯನ್ನು ಸಂಪೂರ್ಣವಾಗಿ ಜಲ್ಲಿ ಪದರ ಒದಗಿಸಿ ಡಾಂಬರು ಮಾಡುವುದು ಮತ್ತು ಮೋರಿಗಳ ನಿರ್ಮಾಣ ಇತ್ಯಾದಿಗಳನ್ನು ಕೈಗೊಳ್ಳಲು ಒಟ್ಟು ರೂ. 120.00 ಲಕ್ಷ ಬೇಕಾಗಬಹುದು. ಅನುದಾನ ಪೂರ್ಣ ದೊರೆತಲ್ಲಿ ಸುಮಾರು 3 ವರ್ಷಗಳ ಕಾಲಾವಧಿ ಬೇಕಾಗುತ್ತದೆ.

ಇ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿನ ಈ ರಸ್ತೆಯನ್ನು ಇತ್ತೀಚೆಗೆ ಮೇಲ್ದರ್ಜೆಗೇರಿಸಿ

ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡಿದ್ದು ಅನುದಾನದ ಲಭ್ಯತೆಯನ್ನು ಅನುಸರಿಸಿ ಹಂತ ಹಂತವಾಗಿ ಅಭಿವೃದ್ಧಿಪಡಿಸಲಾಗುವುದು.

ರಾಜ್ಯದ ನೀರಾವರಿ ಯೋಜನೆಗಳಿಗೆ ಹ್ಯಾಧಾನ್ಯತೆಯ ಮೇಲೆ ಹಣ ಬಿಡುಗಡೆ

461 (208): ಶ್ರೀ ಗುರುಪಾದಪ್ಪ ನಾಗ್ಮಾರ್‌ಪಳ್ಳಿ (ಬೀದರ್):–

ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1984ರಿಂದ 1988ರವರೆಗೆ ರಾಜ್ಯದ ನೀರಾವರಿ ಯೋಜನೆಗಳಿಗಾಗಿ ಪ್ರತಿ ವರ್ಷ ಬಿಡುಗಡೆ ಮಾಡಲಾದ ಹಣದ ಪ್ರಮಾಣವೆಷ್ಟು; (ಪ್ರತಿಯೊಂದು ಯೋಜನೆಯ ಬಗ್ಗೆ ಪ್ರತ್ಯೇಕ ವಿವರಗಳನ್ನು ನೀಡುವುದು);

ಆ) 1989ರಿಂದ 1992ರವರೆವಿಗೆ ರಾಜ್ಯದ ನೀರಾವರಿ ಯೋಜನೆಗಳಿಗೆ ಬಿಡುಗಡೆ ಮಾಡಲಾದ ಹಣದ ಪ್ರಮಾಣವೆಷ್ಟು;

ಇ) ರಾಜ್ಯದ ನೀರಾವರಿ ಯೋಜನೆಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಿ ನಮ್ಮ ಪಾಲಿನ ನೀರನ್ನು ನಾವು ಉಪಯೋಗಿಸಿಕೊಳ್ಳಲು ಅನುಕೂಲವಾಗುವಂತೆ ಮುಂಬರುವ ವರ್ಷಗಳಲ್ಲಿ ಆಧ್ಯತೆಯ ಮೇಲೆ ನೀರಾವರಿ ಯೋಜನೆಗಳಿಗಾಗಿ ಹಣವನ್ನು ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):–

ಅ) ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿಯಲ್ಲಿ ನೀಡಲಾಗಿದೆ.

ಆ) 880.49 ಕೋಟಿ ರೂ.ಗಳು (1.4.89 ರಿಂದ 31.12.92ರವರೆಗೆ)

ಇ) ಹೌದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 208ರ ವಿವರಣಾ ಪಟ್ಟಿ

ಕ್ರ. ಸಂ.	ಯೋಜನೆಯ ಹೆಸರು	ಖರ್ಚಾದ ಹಣ (ಕೋಟಿ ರೂ.ಗಳಲ್ಲಿ)				
		1984-85	1985-86	1986-87	1987-88	1988-89
1	2	3	4	5	6	8
	ಅ. ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆ ಕಾಮಗಾರಿಗಳು:					
1.	ಕೃಷ್ಣಾ ಮೇಲ್ದಂಡೆ	41.42	46.45	53.13	43.47	50.12
2.	ರಾಷ್ಟ್ರೀಯ ಜಲ ನಿರ್ವಹಣೆ ಯೋಜನೆ	–	–	–	1.15	3.86
3.	ಘಟಪ್ರಭ – 3	9.53	9.23	9.87	10.84	10.06
4.	ಮಲಪ್ರಭ	11.58	12.21	15.01	13.45	15.56
5.	ಬೆಣ್ಣೆ ತೋರಾ	0.79	1.11	1.63	2.11	2.28
6.	ಭದ್ರ	1.65	1.35	0.85	1.03	3.39